ಎಲ್.ಎ.ಸಿ ನಂ.04/2019
ಪಿ. ಡಬ್ಲ್ಯೂ .1

**ಸಾಕ್ಷಿಯನ್ನು ದಿನಾಂಕ 15.10.2024 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ</u>**

ಬಸಪ್ಪ ಚನ್ನಪ್ಪ ತಿಮ್ಮಣ್ಣವರರವರು ನನ್ನ ದತ್ತಕ ತಂದೆ. ಭೂ ಸ್ವಾಧೀನವಾದ ಜಮೀನು ಸದರಿ ಬಸಪ್ಪ ತಿಮ್ಮಣ್ಣರವರಿಗೆ ಸೇರಿರುತ್ತದೆ. ಭೂ ಸ್ವಾಧೀನ ಕಾಲಕ್ಕೆ ಸದರಿ ಜಮೀನು ಲಕ್ಷ್ಮವ್ವ ಕೋಂ ಶಿವಪ್ಪ ತಿಮ್ಮಣ್ಣವರ್, ಚನ್ನಪ್ಪ ಕರಿಯಪ್ಪ ತಿಮ್ಮಣ್ಣವರ್ ಮತ್ತು ಸಾವಂತ್ರವ್ವ ಚನ್ನಪ್ಪ ತಿಮ್ಮಣ್ಣವರ್ ಅವರ ಹೆಸರಿನಲ್ಲಿತ್ತು ಅಂದರೆ ಸರಿ. ಸದರಿ ಕಾಲಕ್ಕೆ ಜಮೀನು ಬಸಪ್ಪ ತಿಮ್ಮಣ್ಣವರ್ ಅವರ ಹೆಸರಿನಲ್ಲಿ ಇರಲಿಲ್ಲ ಅಂದರೆ ಸರಿ. ಲಕ್ಷ್ಮವ್ವ ಕೋಂ ಶಿವಪ್ಪ ತಿಮ್ಮಣ್ಣವರ್, ಚನ್ನಪ್ಪ ಕರಿಯಪ್ಪ ತಿಮ್ಮಣ್ಣವರ್ ಮತ್ತು ಸಾವಂತ್ರವ್ವ ಚನ್ನಪ್ಪ ತಿಮ್ಮಣ್ಣವರ್ ಅವರು ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ಯಾವುದೇ ರೆಫರೆನ್ಸ್ ಅರ್ಜಿ ಸಲ್ಲಿಸಿರುವುದಿಲ್ಲ

ಅಂದರೆ ಸರಿ. ಭೂ ಸ್ವಾಧೀನವಾದ ಜಮೀನು ಬಸಪ್ಪ ಚನ್ನಪ್ಪ ತಿಮ್ಮಣ್ಣವರ್ ಅವರ ಹೆಸರಿನಲ್ಲಿ ಇದ್ದ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಮೂಲ ರೆಫರೆನ್ಸ್ ಅರ್ಜಿಯಲ್ಲಿ ಬಸಪ್ಪರವರ ಸಹಿ ಇಲ್ಲದಿದ್ದು ಸದರಿ ರೆಫರೆನ್ಸ್ ಅರ್ಜಿಯನ್ನು ಬಸಪ್ಪರವರು ಸಲ್ಲಿಸಿರಲಿಲ್ಲ ಅಂದರೆ ಸರಿಯಲ್ಲ. ಭೂ ಸ್ವಾಧೀನವಾಗುವ ಕಾಲಕ್ಕೆ ಜಮೀನು ಲಕ್ಷ್ಮವ್ವ ಕೋಂ ಶಿವಪ್ಪ ತಿಮ್ಮಣ್ಣವರ್, ಚನ್ನಪ್ಪ ಕರಿಯಪ್ಪ ತಿಮ್ಮಣ್ಣವರ್ ಮತ್ತು ಸಾವಂತ್ರವ್ವ ಚನ್ನಪ್ಪ ತಿಮ್ಮಣ್ಣವರ್ ಅವರ ಹೆಸರಿನಲ್ಲಿ ಇದ್ದುದ್ದರಿಂದ ಬಸಪ್ಪರವರು ರೆಫರೆನ್ಸ್ ಅರ್ಜಿಯನ್ನು ಸಲ್ಲಿಸಲು ಅರ್ಹರಿರಲಿಲ್ಲ ಅಂದರೆ ಸರಿಯಲ್ಲ. ಭೂ ಸ್ವಾಧೀನವಾದ ಜಮೀನನ್ನು ಬಸಪ್ಪರವರ ಹೆಸರಿನಲ್ಲಿ ಬಿಟ್ಟು ಕೊಟ್ಟಿದ್ದಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಚನ್ನಪ್ಪ ಕರಿಯಪ್ಪ ತಿಮ್ಮಣ್ಣವರ್ ಅವರು ಬಸಪ್ಪರವರ ತಂದೆ. ಶಿವಪ್ಪ ತಿಮ್ಮಣ್ಣವರ್ ಅವರು ಬಸಪ್ಪರವರ ಅಣ್ಣನಾಗಿರುತ್ತಾರೆ. ಶಿವಪ್ಪ ತಿಮ್ಮಣ್ಣವರ್ ಮರಣ ಹೊಂದಿರುತ್ತಾರೆ. ಲಕ್ಷ್ಮವ್ವ ತಿಮ್ಮಣ್ಣವರ್ ಅವರು ಬಸಪ್ಪರವರ ತಾಯಿಯಾಗಿರುತ್ತಾರೆ. ಭೂ ಸ್ವಾಧೀನವು ಲಕ್ಷ್ಮವ್ವ ಕೋಂ ಶಿವಪ್ಪ ತಿಮ್ಮಣ್ಣವರ್ ಅವರ ಹೆಸರಿನಲ್ಲಿ ಆಗಿದ್ದು ಲಕ್ಷ್ಮವ್ವರವರು ಬಸಪ್ಪರವರ ತಾಯಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಕ್ಷ್ಮವ್ವರವರಾಗಲೀ, ಶಿವಪ್ಪರವರಾಗಲೀ ಭೂ ಸ್ವಾಧೀನವಾದ ಜಮೀನನ್ನು ಬಸಪ್ಪ ತಿಮ್ಮಣ್ಣವರ್ ಅವರಿಗೆ ಬಿಟ್ಟುಕೊಟ್ಟಿರಲಿಲ್ಲ ಅಂದರೆ ಸರಿಯಲ್ಲ. ಭೂ ಸ್ವಾಧೀನವಾದ ಜಮೀನನ್ನು ಲಕ್ಷ್ಮವ್ವ ಕೋಂ ಶಿವಪ್ಪ ತಿಮ್ಮಣ್ಣವರ್ ಅವರು ಬಸಪ್ಪರವರಿಗೆ ಬಿಟ್ಟು ಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಬಸಪ್ಪರವರ ದತ್ತಕ ಪುತ್ರ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ಚನ್ನಪ್ಪರವರ ತಾಯಿ ಸಾವಂತ್ರವ್ವ ಅಂದರೆ ಸರಿಯಲ್ಲ. ಸಾವಂತ್ರವ್ವ ಅವರು ಬಸಪ್ಪರವರ ಹೆಸರಿಗೆ ಯಾವುದೇ ಜಮೀನು ಬಿಟ್ಟು ಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ.

ಸಾವಂತ್ರವ್ವ ಮತ್ತು ಲಕ್ಷ್ಮವ್ವರವರು ನನಗೆ ಅರ್ಜಿ ಸಲ್ಲಿಸಲು ಯಾವುದೇ ಅಧಿಕಾರ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಭೂ ಸ್ವಾಧೀನ ಕಾಲಕ್ಕೆ ಜಮೀನಿನ ದಾಖಲೆಯಲ್ಲಿ ಹೆಸರಿದ್ದವರಿಗೆ ನಾನು ಯಾವುದೇ ರೀತಿ ಸಂಬಂಧಿಕನಲ್ಲ ಅಂದರೆ ಸರಿಯಲ್ಲ. ನಾನು ಬಸಪ್ಪ ತಿಮ್ಮಣ್ಣವರ್ ಅವರ ದತ್ತಕ ಪುತ್ರ ಅಲ್ಲ ಅಂದರೆ ಸರಿಯಲ್ಲ. ಲಕ್ಷ್ಮವ್ವ ಮತ್ತು ಸಾವಂತ್ರವ್ವರವರ ಭಾಗದ ಜಮೀನಿನಲ್ಲಿ ಪರಿಹಾರ ಕೇಳಲು ನಾನು ಅರ್ಹನಲ್ಲ ಅಂದರೆ ಸರಿಯಲ್ಲ. ರೆಫರೆನ್ಸ್ ಅರ್ಜಿಯಲ್ಲಿ ಬಸಪ್ಪರವರ ಸಹಿ ಇರುವುದಿಲ್ಲ ಮತ್ತು ಅದು ಬಸಪ್ಪರವರ ರೆಫರೆನ್ಸ್ ಅರ್ಜಿ ಆಗಿರುವುದಿಲ್ಲ ಅಂದರೆ ಸರಿಯಲ್ಲ. ಭೂ ಸ್ವಾಧೀನವಾದ ಜಮೀನಿಗೆ ನಾನಾಗಲೀ, ಬಸಪ್ಪರವರಾಗಲೀ ಮಾಲೀಕರಲ್ಲ ಅಂದರೆ ಸರಿಯಲ್ಲ.

(**ಉಳಿದಂತೆ 1 ಮತ್ತು 3 ನೇ ಎದುರುದಾರರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು 2 ನೇ ಎದುರುದಾರರ ಪರ ವಕೀಲರು ವಿನಂತಿಸಿರುತ್ತಾರೆ**.)

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ
ಧಾರವಾಡ.